Asphalting to roads @ Chandrappa Layout ಪುಟದ ಸಂಖ್ಯೆ .....01.....
at Bharath Adithya Nagara Surrounding ಇಡಿಕಡತದ ಸಂಖ್ಯೆ .....
ward no-03 of Yelahanka Satellite Town.

ಟಿಪ್ಪಣಿಗಳು ಮತ್ತು ಆಜ್ಞೆಗಳು

ಮಂಡಿಸಿದೆ.

ವಿಷಯ:- Asphalting to roads at Chandrappa layout Bharath nagara adithya nagara and surrounding areas in ward no -03 Yelahanka Satellite Town sub Division

ಉಲ್ಲೇಖ:-

1. ಸರ್ಕಾರದ ಆದೇಶ ಸಂಖ್ಯೆ : ನಅಇ 648 ಎಂ.ಎನ್.ವೈ 2018 ಬೆಂಗಳೂರು ದಿನಾಂಕ: 31-05-2019.
2. ಸರ್ಕಾರದ ಆದೇಶ ಸಂಖ್ಯೆ : ನಅಇ 375 ಎಂ.ಎನ್.ವೈ 2018 ಬೆಂಗಳೂರು ದಿನಾಂಕ: 20-9-2019.
3. ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ: ಆಯುಕ್ತರು/ಪಿ.ಆರ್/ 3159/ 2019-20 ದಿನಾಂಕ: 25-09-2019.
4. ಸರ್ಕಾರದ ಆದೇಶ ಸಂಖ್ಯೆ : ನಅಇ 250 ಎಂ.ಎನ್.ವೈ 2019 ಬೆಂಗಳೂರು ದಿನಾಂಕ: 15-10-2019.
5. ಬಿ.ಬಿ.ಎಂ.ಪಿ ಸದಸ್ಯರು ಅಟ್ಟೂರು ವಾರ್ಡ್ ನಂ-03 ರವರ ಮನವಿ ಪತ್ರದ ದಿನಾಂಕ: 18-10-2019.

★ ★ ★ ★ ★

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಪ್ರದೇಶಗಳಲ್ಲಿ ಮೂಲಭೂತ ಸೌಕಾರ್ಯಗಳ ಅಭಿವೃದ್ದಿಗಾಗಿ ಮಾನ್ಯ ಮುಖ್ಯ ಮಂತ್ರಿಗಳ ನವನಗರೋತ್ಥಾನ ಯೋಜನೆಯಡಿಯಲ್ಲಿ ಸರ್ಕಾರದ ಆದೇಶ ಸಂಖ್ಯೆ : ನಅಇ 375 ಎಂ.ಎನ್.ವೈ 2018 ಬೆಂಗಳೂರು ದಿನಾಂಕ: 20-9-2019. ರಂದು ವಿವಿಧ ಲೆಕ್ಕಶಿರ್ಷಿಕೆಯಡಿಯಲ್ಲಿ ರೂ. 8015.37 ಕೋಟಿಗಳ ಅನುದಾನ ಮಿಸಲಿಟ್ಟಿರುತ್ತಾರೆ. ಅದರಂತೆ ಯಲಹಂಕ ವಿಧಾನಸಭಾ ಕ್ಷೇತ್ರಕ್ಕೆ ಒಳಪಡುವ ಅಟ್ಟೂರು ವಾರ್ಡ್ ನಂ-03ರ ವಿವಿಧ ಪ್ರದೇಶಗಳಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಹೊಸದಾಗಿ ಸೇರ್ಪಡೆಗೊಂಡಿರುವ 110 ಹಳ್ಳಿಗಳನ್ನು ಅಭಿವೃದ್ದಿ ಪಡಿಸುವ ಸಲುವಾಗಿ ಉಲ್ಲೇಖ ಪತ್ರ (1)ರ ಆದೇಶದಂತೆ ಅನುಬಂಧ-07 ರಲ್ಲಿ ವಿವಿಧ ಕಾಮಗಾರಿಗಳಿಗೆ ಅನುಮೋದನೆ ದೊರೆತಿದ್ದು, ಜಾಬ್ ಸಂಕೇತ ನೀಡಿರುತ್ತಾರೆ. ಅದರಂತೆ ಬಿ.ಬಿ.ಎಂ.ಪಿ ಯಲಹಂಕ ವಿಭಾಗದ ವ್ಯಾಪ್ತಿಯ ವಾರ್ಡ್ ನಂ-03ರಲ್ಲಿ ಕೆಲವು ಹಳ್ಳಿಗಳ ಬಿ.ಬಿ.ಎಂ.ಪಿಗೆ ಹೊಸದಾಗಿ ಸೇರ್ಪಡೆಗೊಂಡಿದ್ದು, ಸದರಿ ಹಳ್ಳಿಗಳಲ್ಲಿ ಬಿ.ಡಬ್ಲ್ಯೂಎಸ್.ಎಸ್.ಬಿ ಇಲಾಖೆಯಿಂದ ಒಳಚರಂಡಿ ಸಂಪರ್ಕ ಕಲ್ಪಿಸುವ ಸಲುವಾಗಿ ಸ್ಯಾನಿಟರಿ ಹಾಗೂ ಕಾವೇರಿ ಕುಡಿಯುವ ನೀರು ಸರಬರಾಜು ವ್ಯವಸ್ಥೆ ಸೀಡಲು ಸದರಿ ಪ್ರದೇಶಗಳಲ್ಲಿರುವ ರಸ್ತೆಗಳನ್ನು ಅಗೆದಿದ್ದು ರಸ್ತೆಗಳನ್ನು ಸರಿಪಡಿಸಿರುವುದಿಲ್ಲ ಈ ವಿಷಯದ ಬಗ್ಗೆ ಅನೇಕ ಭಾರಿ ಸಾರ್ವಜನಿಕರು ಹಾಗೂ ಮಾಧ್ಯಮಗಳು ಹಾಗು ದಿನಪತ್ರಿಕೆಗಳಲ್ಲಿ ಮತ್ತು ಬಿ.ಬಿ.ಎಂ.ಪಿ ಸಹಾಯ ಆಪ್‌ನಲ್ಲಿ ದೂರನ್ನು ಸಲ್ಲಿಸಿದ್ದು ಈ ಹಳ್ಳಿಗಳ ಪ್ರದೇಶಗಳಲ್ಲಿ ತುರ್ತು ಕಾಮಗಾರಿಗಳನ್ನು ಕೈಗೊಂಡು ನಿರ್ವಹಿಸಬೇಕಾಗಿರುತ್ತದೆ.

Areas in Ward No-03.

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
(03)	ಉಲ್ಲೇಖ ಪತ್ರ (4)ರ ಸರ್ಕಾರದ ಆದೇಶದ ಷರತ್ತುಗಳಲ್ಲಿರುವ ಕ್ರ.ಸಂ-04ರಲ್ಲಿ ತುರ್ತು ಸಂದರ್ಭಗಳಲ್ಲಿ ಕಾಮಗಾರಿಗಳನ್ನು ಆರ್ಥಿಕ ಇಲಾಖೆಯ ಅಧಿಸೂಚನೆಯ ಸಂಖ್ಯೆ ಆಇ : 344 ವೆಚ್ಚ-12/2018 ರಂತೆ ವಹಿಸಲು ಅನುಮೋದನೆ ನೀಡಿರುತ್ತಾರೆ. ಹಾಗೂ ಸದರಿ ಆದೇಶದಂತೆ ಅನುಮೋದನೆಯಾಗಿರುವ ಕಾಮಗಾರಿಗಳಲ್ಲಿ ರೂ. 2.00 ಕೋಟಿಗಳು ಹಾಗೂ ಅದಕ್ಕಿಂದ ಕಡಿಮೆ ಮೊತ್ತದ ಮತ್ತು ತುರ್ತು ಕಾಮಗಾರಿಗಳೆಂದು ಬಿ.ಬಿ.ಎಂ.ಪಿ ಯಿಂದ ನಿಯಾಮಾನುಸಾರ ನಿರ್ದರಿಸಿ ಮೆ॥ ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ಮೂಲಕ ಕೈಗೊಂಡು ನಿರ್ವಹಿಸಲು ಹಾಗೂ ಸದರಿ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರಿಗೆ ಅಧಿಕಾರ ಪ್ರತ್ಯಾಯೋಜಿಸಿ ಆದೇಶಿಸಿರುತ್ತಾರೆ.
(04)	ಹಾಗೂ ಉಲ್ಲೇಖ ಪತ್ರ (5)ರಲ್ಲಿ ಬಿ.ಬಿ.ಎಂ.ಪಿ ಸದಸ್ಯರು ವಾರ್ಡ್ ನಂ-03 ರವರು ಪತ್ರ ನೀಡಿ, ವಾರ್ಡ್ ನಂ-03ರ ಪ್ರದೇಶಗಳಲ್ಲಿ ಬಿ.ಡಬ್ಲ್ಯ್ಯು.ಎಸ್.ಎಸ್.ಬಿ ಇಲಾಖೆಯವರು ಕಾವೇರಿ ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವ ಸಲುವಾಗಿ ರಸ್ತೆಗಳನ್ನು ಅಗೆದಿದ್ದು, ಮುಚ್ಚಿರುವುದಿಲ್ಲ, ಆದುದರಿಂದ ಸದರಿ ಪ್ರದೇಶಗಳನ್ನು ತುರ್ತಾಗಿ ಅಭಿವೃದ್ದಿ ಪಡಿಸಿಕೊಡಲು ಕೋರಿರುತ್ತಾರೆ.
(05)	ಆದುದರಿಂದ ಈ ವಿಚಾರವಾಗಿ ಅನೇಕ ಭಾರಿ ಬಿ.ಡಬ್ಲ್ಯ್ಯು.ಎಸ್.ಎಸ್. ಬಿ ಇಲಾಖೆಗೆ ಪತ್ರ ನೀಡಿ ಅಗೆದಿರುವ ರಸ್ತೆಯನ್ನು ಪುನಃಶ್ಚೇತನ ಗೊಳಿಸಲು ಹಣ ಬಿಡುಗಡೆ ಮಾಡುವಂತೆ ಕೋರಲಾಗಿದ್ದು, ಆದರೆ ಯಾವುದೇ ರೀತಿಯ ಅನುದಾನ ಬಿಡುಗಡೆಮಾಡಿರುವುದಿಲ್ಲ, ಆದಕಾರಣ ಉಲ್ಲೇಖ ಪತ್ರ (1)ರ ಸರ್ಕಾರದ ಆದೇಶ ದಂತೆ ಅನುಬಂಧ-2ರಲ್ಲಿ ಬಿ.ಬಿ.ಎಂ.ಪಿಗೆ ಹೊಸದಾಗಿ ಸೇರ್ಪಡೆಗೊಂಡಿರುವ 110 ಹಳ್ಳಿಗಳಿಗೆ ಮಿಸಲಿಟ್ಟಿರುವ ಅನುದಾನದಲ್ಲಿ ವಾರ್ಡ್ ನಂ-03ರ ಜಂಗ್ರಪ್ಪ ಬಡಾವಣೆ, ಭರತ್ ನಗರ ಮತ್ತು ಆಧಿತ್ಯ ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳನ್ನು ಅಭಿವೃದ್ದಿ ಪಡಿಸಲು ಈ ಮೇಲ್ಕಂಡ ಕಾಮಗಾರಿಗೆ 2018-19ನೇ ಸಾಲಿನಲ್ಲಿ ರೂ. 200.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ಲೋಕೋಪಯೋಗಿ ಇಲಾಖೆ 2018-19ನೇ ಸಾಲಿನಲ್ಲಿ ಮಂಜೂರಾಗಿರುವ ದರಪಟ್ಟಿಯಿಂತೆ ತಯಾರಿಸಲಾಗಿದೆ.
(06)	ಸದರಿ ಕಾಮಗಾರಿಗೆ 2018-19ನೇ ಸಾಲಿನ "ಮಾನ್ಯ ಮುಖ್ಯ ಮಂತ್ರಿಗಳ ನವನಗರೋತ್ಥಾನ ಯೋಜನೆ" ಯಡಿಯಲ್ಲಿ ಜಾಬ್ ಸಂಕೇತ 003-20-000080. ರಂತೆ ದೊರೆತಿರುವುದರಿಂದ ಈ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜುರಾತಿ ಹಾಗೂ ಸದರಿ ಕಾಮಗಾರಿಯನ್ನು ತುರ್ತಾಗಿ ಮೆ॥ಕೆ.ಆರ್.ಐ.ಡಿ.ಎಲ್ ಸಂಸ್ಥೆ ವತಿಯಿಂದ ಕೈಗೊಂಡು ನಿರ್ವಹಿಸಲು ಕೋರಿ ಕಡತವನ್ನು ತಮ್ಮ ಮುಂದಿನ ಆದೇಶಕ್ಕಾಗಿ ಮಂಡಿಸಿದೆ. ಸಹಾಯಕ ಅಭಿಯಂತರರು ಸಹಾಯಕ ಕಾರ್ಯಪಾಲಕ ಅಭಿಯಂತರರು

ಟಿಪ್ಪಣಿಗಳು ಮತ್ತು ಆಜ್ಞೆಗಳು

ಕಾರ್ಯಪಾಲಕ ಅಭಿಯಂತರರು (ಯು.ಪಿ)

(07)

ಕಂಡಿಕೆ (1) ರಿಂದ (6) ರವರೆಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಯಲಹಂಕ ಉಪನಗರ ಉಪ ವಿಭಾಗರವರು ವಿವರಿಸಿರುವಂತೆ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಪ್ರದೇಶಗಳಲ್ಲಿ ಮೂಲಭೂತ ಸೌಕಾರ್ಯಗಳ ಅಭಿವೃದ್ಧಿಗಾಗಿ ಮಾನ್ಯ ಮುಖ್ಯ ಮಂತ್ರಿಗಳ ನವ ನಗರೋತ್ಥಾನ ಯೋಜನೆಯಡಿಯಲ್ಲಿ ರೂ. 8015.37 ಕೋಟಿಗಳ ಅನುದಾನ ಮೀಸಲಿಟ್ಟಿದ್ದು, ಸರ್ಕಾರದ ಆದೇಶ ಸಂಖ್ಯೆ :ನ:ಅ.ಇ 375 ಎಂ.ಎನ್.ವೈ 2018 ಬೆಂಗಳೂರು ದಿನಾಂಕ: 20-09-2018. ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಹೊಸದಾಗಿ ಸೇರ್ಪಡೆಗೊಂಡಿರುವ 110 ಹಳ್ಳಿಗಳನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ಉಲ್ಲೇಖ ಪತ್ರ (1)ರ ಆದೇಶದಂತೆ ಅನುಬಂಧ-07ರಲ್ಲಿ ವಿವಿಧ ಕಾಮಗಾರಿಗಳಿಗೆ ಅನುಮೋದನೆ ದೊರೆತಿದ್ದು, ಜಾಬ್ ಸಂಕೇತ ನೀಡಿರುತ್ತಾರೆ.

(08)

ಅದರಂತೆ ಬಿ.ಬಿ.ಎಂ.ಪಿ ಯಲಹಂಕ ವಿಭಾಗದ ವ್ಯಾಪ್ತಿಯ ವಾರ್ಡ್ ನಂ-04 ರಲ್ಲಿ ಕೆಲವು ಹಳ್ಳಿಗಳ ಬಿ.ಬಿ.ಎಂ.ಪಿಗೆ ಹೊಸದಾಗಿ ಸೇರ್ಪಡೆಗೊಂಡಿದ್ದು, ಸದರಿ ಹಳ್ಳಿಗಳಲ್ಲಿ ಬಿ.ಡಬ್ಲ್ಯೂಎಸ್.ಎಸ್.ಬಿ ಇಲಾಖೆಯಿಂದ ಒಳಚರಂಡಿ ಸಂಪರ್ಕ ಕಲ್ಪಿಸುವ ಸಲುವಾಗಿ ಸ್ಯಾನಿಟರಿ ಹಾಗೂ ಕಾವೇರಿ ಕುಡಿಯುವ ನೀರು ಸರಬರಾಜು ವ್ಯವಸ್ಥೆ ನೀಡಲು ಸದರಿ ಪ್ರದೇಶಗಳಲ್ಲಿರುವ ರಸ್ತೆಗಳನ್ನು ಅಗೆದಿದ್ದು ರಸ್ತೆಗಳನ್ನು ಸರಿಪಡಿಸಿರುವುದಿಲ್ಲ ಈ ವಿಷಯದ ಬಗ್ಗೆ ಅನೇಕ ಭಾರಿ ಸಾರ್ವಜನಿಕರು ಹಾಗೂ ಮಾಧ್ಯಮಗಳು ಹಾಗು ದಿನಪತ್ರಿಕೆಗಳಲ್ಲಿ ಮತ್ತು ಬಿ.ಬಿ.ಎಂ.ಪಿ ಸಹಾಯ ಆಪ್‌ನಲ್ಲಿ ದೂರನ್ನು ಸಲ್ಲಿಸಿದ್ದು ಈ ಹಳ್ಳಿಗಳ ಪ್ರದೇಶಗಳಲ್ಲಿ ತುರ್ತು ಕಾಮಗಾರಿಗಳನ್ನು ಕೈಗೊಂಡು ನಿರ್ವಹಿಸಬೇಕಾಗಿರುತ್ತದೆ.

(09)

ಉಲ್ಲೇಖ ಪತ್ರ (4)ರ ಸರ್ಕಾರದ ಆದೇಶದ ಷರತ್ತುಗಳಲ್ಲಿರುವ ಕ್ರ.ಸಂ-04ರಲ್ಲಿ ತುರ್ತು ಸಂದರ್ಭಗಳಲ್ಲಿ ಕಾಮಗಾರಿಗಳನ್ನು ಆರ್ಥಿಕ ಇಲಾಖೆಯ ಅಧಿಸೂಚನೆಯ ಸಂಖ್ಯೆ ಆಇ : 344 ವೆಚ್ಚ-12/2018 ರಂತೆ ವಹಿಸಲು ಅನುಮೋದನೆ ನೀಡಿರುತ್ತಾರೆ. ಹಾಗೂ ಸದರಿ ಆದೇಶದಂತೆ ಅನುಮೋದನೆಯಾಗಿರುವ ಕಾಮಗಾರಿಗಳಲ್ಲಿ ರೂ. 2.00 ಕೋಟಿಗಳು ಹಾಗೂ ಅದಕ್ಕಿಂದ ಕಡಿಮೆ ಮೊತ್ತದ ಮತ್ತು ತುರ್ತು ಕಾಮಗಾರಿಗಳೆಂದು ಬಿ.ಬಿ.ಎಂ.ಪಿ ಯಿಂದ ನಿಯಾಮಾನುಸಾರ ನಿರ್ದರಿಸಿ ಮೆ||.ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ಮೂಲಕ ಕೈಗೊಂಡು ನಿರ್ವಹಿಸಲು ಸೂಚಿಸಿರುವ ಮೆರೆಗೆ ಮೇಲ್ಕಂಡ ಕಾಮಗಾರಿಯನ್ನು ಅತಿ ತುರ್ತಾಗಿ ಕೈಗೊಂಡು ಅನುಷ್ಠಾನಗೊಳಿಸಬೇಕಾಗಿರುತ್ತದೆ. ಆದುದರಿಂದ ಈ ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿ ಕಡತವನ್ನು ತಮ್ಮ ಮುಂದಿನ ಆದೇಶಕ್ಕಾಗಿ ಮಂಡಿಸಿದೆ.

1. ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡಲು ಕೋರಿ.
2. ಸದರಿ ಕಾಮಗಾರಿಯು ರೂ. 2.00 ಕೋಟಿ ಹಾಗೂ ಅದಕ್ಕಿಂತ ಕಡಿಮೆ ಇದ್ದು, ಅತಿ ತುರ್ತಾಗಿ ನಿರ್ವಹಿಸಬೇಕಾಗಿರುವುದರಿಂದ ಮೆ॥ ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ವಹಿಸಲು ಅನುಮೋದನೆ ಕೋರಿ.

ಕಾರ್ಯಪಾಲಕ ಅಭಿಯಂತರರು
Executive Engineer
ಯಲಹಂಕ ವಿಭಾಗ
Yelahanka

ಮುಖ್ಯ ಅಭಿಯಂತರರು (ಯಿ.ವ)

(10) ಕಂಡಿಕೆ (9) ರಿಂದ (1) ರವರೆಗೆ ತಮ್ಮ ಅವಗಾಹನೆಗೆ ತರುತ್ತಾ ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸದಾಗಿ ಸೇರ್ಪಡೆಗೊಂಡ 110 ಹಳ್ಳಿಗಳ ಪ್ರದೇಶಗಳನ್ನು ಅಭಿವೃದ್ಧಿ ಪಡಿಸಲು ಹಾಗೂ ವಾರ್ಡ್‌ಗಳ ವ್ಯಾಪ್ತಿಯಲ್ಲಿರುವ ಪ್ರದೇಶಗಳನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ಹಾಗೂ ಸದರಿ ರಸ್ತೆಗಳಲ್ಲಿ ಕಾವೇರಿ ಮತ್ತು ನೀರು ಸರಬರಾಜು ಕೊಳವೆಸಾಲುಗಳನ್ನು ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ ವತಿಯಿಂದ ಆಳವಡಿಸುತ್ತಿದ್ದು, ಈ ರಸ್ತೆಗಳು ತುಂಬಾ ಹದಗೆಟ್ಟಿರುತ್ತವೆ. ಆದುದರಿಂದ ಸದರಿ ಕಾಮಗಾರಿಗಳು ಅತಿ ತುರ್ತು ಎಂದು ಪರಿಗಣಿಸಿ ಕೈಗೊಳ್ಳಲಾಗಿದ್ದು, ಹಾಗೂ ಸರ್ಕಾರದ ಆದೇಶದ ಸಂಖ್ಯೆ ನಅಇ/250/ಎಂ.ಎನ್.ವೈ/2019 ಬೆಂಗಳೂರು ದಿನಾಂಕ:೯-10-2019ರ ಆದೇಶದಲ್ಲಿ ಮೆ॥ ಕೆ.ಆರ್.ಐ.ಡಿ.ಎಲ್ ಸಂಸ್ಥೆ ಮುಖಾಂತರ ನಿರ್ವಹಿಸಲು ಅನುಮೋದನೆ ನೀಡಿರುತ್ತಾರೆ. ಈ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ ಈ ಕಾಮಗಾರಿಯನ್ನು ತುರ್ತು ಕಾಮಗಾರಿಯೆಂದು ಪರಿಗಣಿಸಿ ಸದರಿ ಕಾಮಗಾರಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲು ಹಾಗೂ ಮೆ॥ ಕೆ.ಆರ್.ಐ.ಡಿ.ಎಲ್ ಸಂಸ್ಥೆ ಮುಖಾಂತರ ಕಾಮಗಾರಿಯನ್ನು ನಿರ್ವಹಿಸಲು ಮಾನ್ಯ ಆಯುಕ್ತರ ಅನುಮೋದನೆ ಕೋರಿ ಕಡತವನ್ನು ಮಂಡಿಸಿದೆ.

Para 10/N for approval.

(11) ಮೇಲಿನ ವಿಷಯವನ್ನು.

ಮುಖ್ಯ ಅಭಿಯಂತರರು
ಯಲಹಂಕ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Special Commissioner (Project)
Bruhat Bangalore Mahanagara Palike

(12) Hon. Comm. Sir, ಕಂಪಿಕೆ 10 ಸ್ನ ಅನುಮೋದನೆಯನ್ನು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
Commissioner
Bruhat Bengaluru Mahanagara Palike

ಬಿ.ಬಿ.ಎಂ.ಪಿ. ಆಯುಕ್ತರ ಆಪ್ತ ಕಾರ್ಯಾಲಯ
ಸಂಖ್ಯೆ ಕಿಸಾಸ್.ಆರ್.1ಲ್ 40735
ದಿನಾಂಕ 24.10.19

ವಾರ್ಡ್ ನಂ- 03. ಕಡತದ ಸಂಖ್ಯೆ .....

ಟಿಪ್ಪಣಿಗಳು ಮತ್ತು ಆಜ್ಞೆಗಳು

ವಿಷಯ:– Asphalting to roads at Chandrappa layout Bharath nagara adithya nagara and surrounding areas in ward no -03 Yelahanka Satellite Town sub Division ಎಂಬ ಕಾಮಗಾರಿಗೆ ಡಿ.ಪಿ.ಆರ್‌ನ ಟೆಂಡರ್ ಆಹ್ವಾನಿಸಿದ್ದು, ಇದರ ತಾಂತ್ರಿಕ ಮೌಲ್ಯಮಾಪನದ ಬಗ್ಗೆ.

ಉಲ್ಲೇಖ: BBMP/EE/ YNK.D/ E-PMT/11/2019-20 dated: 09-10-2019.

(13) ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಕಂಡಿಕೆ (12)ರಲ್ಲಿ ಮಾನ್ಯ ಮುಖ್ಯಅಭಿಯಂತರರು ಯಲಹಂಕ ವಲಯರವರು ಅನುಮೋದನೆಯಿಂತೆ ಸದರಿ ಕಾಮಗಾರಿಗೆ ಉಲ್ಲೇಖ ಪತ್ರದಂತೆ ಡಿ.ಪಿ.ಆರ್. ಸಿದ್ದಪಡಿಸಿ ಅಲ್ಪಾವದಿ ಟೆಂಡರ್ ಆಹ್ವಾನಿಸಿದ್ದು, ಅದರಂತೆ ನಾಲ್ಕು ಬಿಡ್ಡುದಾರರು ಭಾಗವಹಿಸಿದ್ದು ವಿವರ ಈ ಕೆಳಕಂಡಂತಿರುತ್ತದೆ.

Sl No	Consultancy Name	Remarks
1	Sri Hemanth kumar B J (Sriya Constructions and Consultancy)	
2	SRI.ARUN KUMAR DAS (AARTN ASSOCIATES)	
3	Sri Prakash krishnappa (Yashasvini Engineering cnsultants)	
4	SRI. KARTHIK RECHAN R (RUDRAPRASAD CONSULTANTS)	

(14) ಸದರಿ ಬಿಡ್ಡುದಾರರು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ R.F.P Document ನಲ್ಲಿರುವ ಷರತ್ತುಗಳಂತೆ ಒಟ್ಟು 75 ಅಂಕಗಳು ಪಡೆಯುವುದು ಕಡ್ಡಾಯವಾಗಿರುತ್ತದೆ. ಆದರೆ ಈ ಮೇಲ್ಕಂಡ ನಾಲ್ಕು ಜನ ಬಿಡ್ಡುದಾರರಲ್ಲಿ ಕ್ರ.ಸಂ 2,3 ಮತ್ತು 4ರ ಬಿಡ್ಡುದಾರರು 75 ಅಂಕಗಳಿಗಿಂತ ಕಡಿಮೆ ಅಂಕಗಳನ್ನು ಪಡೆದಿರುವುದರಿಂದ ಇವರು ಅನರ್ಹರಾಗಿರುತ್ತಾರೆ. ಹಾಗೂ ಕ್ರ.ಸಂ.1 ರ ಬಿಡ್ಡುದಾರರು ತಾಂತ್ರಿಕವಾಗಿ ಅರ್ಹರಾಗಿರುವುದರಿಂದ ಸದರಿಯವರ ತಾಂತ್ರಿಕ ಬಿಡ್ಡನ್ನು ಅನುಮೋದಿಸಲು ಹಾಗೂ ಆರ್ಥಿಕ ಬಿಡ್ಡನ್ನು ತೆರೆಯಲು ಅನುಮೋದನೆ ಕೋರಿ ಕಡತವನ್ನು ತಮ್ಮ ಮುಂದಿನ ಆದೇಶಕ್ಕಾಗಿ ಮಂಡಿಸಿದೆ.

15/10/19

ಕಾರ್ಯ ನಿರ್ವಾಹಕ ಅಭಿಯಂತರರು
ಯಲಹಂಕ ಬಿಬಿಎಂಪಿ

Executive Engineer
B.B.M.P Division
Yelahanka

(15) ಮುಖ್ಯ ಅಭಿಯಂತರರು (ಯಿ.ವ)

ಮುಖ್ಯ ಅಭಿಯಂತರರು
ಯಲಹಂಕ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪು.ತಿ.ನೋ